ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಪ್ರಾಸಾ | 17 |
| ಚಾಸಾ | 12 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ:31/2022**

**ದಿನಾಂಕ: 25.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಗೋಪಿಕೃಷ್ಣ ಕೆ.ಎನ್ |
| ತಂದೆಯ ಹೆಸರು | : | ನಾರಾಯಣಸ್ವಾಮಿ ಕೆ ಎನ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಹಿರಿಯ ಮೋಟಾರ್ ವಾಹನ ನಿರೀಕ್ಷಕರು ಆರ್.ಟಿ.ಒ ಚಿಕ್ಕಬಳ್ಳಾಪುರ |
| ವಾಸಸ್ಥಳ | : | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ನಾನು ಕಳೆದ 6 ವರ್ಷಗಳಿಂದ ಹಿರಿಯ ಮೋಟಾರ್ ವಾಹನ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿನಾಂಕ 22-03-2021 ರಂದು ಆರಕ್ಷಕರ ಉಪನೀರಿಕ್ಷಕರು ಶಿಡ್ಲಘಟ್ಟ

| | |
|---|---|
| ಫ್ರಾಸಾ | 17 |
| ಚಾಸಾ | 12 |

ಗ್ರಾಮಾಂತರ ಪೋಲಿಸ್ ಠಾಣೆ ಅವರಿಂದ ಬಂದ ಮನವಿ ಮೇರೆಗೆ ಅದೇ ದಿನ ಮದ್ಯಾಹ್ನ 03-00 ಗಂಟೆಗೆ ಶಿಡ್ಲಘಟ್ಟ ಗ್ರಾಮಾಂತರ ಪೋಲಿಸ್ ಠಾಣೆಯ ಆವರಣಕಕ್ಷ ಭೇಟಿ ನೀಡಿ ಎರಡು ವಾಹನಗಳಾದ KA-02-MD-3487 Maruthi Omni Car ಮತ್ತು KA-04-D-8475 Canter ವಾಹನವನ್ನು ಪರಿಶೀಲನೆ ಮಾಡಿ ವರದಿಯನ್ನು ನೀಡಿರುತ್ತೇನೆ. ಸದರಿ ಮಾರುತ ಒಮಿನಿಯನ್ನು ಪರಿಶೀಲಿಸಿದಾಗ ಅದರ ಹೆಡ್ ಲೈಟ್ ಗಳು ಜಕಮ್ ಗೊಂಡಿದ್ದವು. ಅದೇ ರೀತಿ ಡೋರು ಮತ್ತು ಡೋರ್ ಗ್ಲಾಸ್, ಮೇಲ್ಚಾವಣಿ ಜಕಮ್‌ಗೊಂಡಿರುತ್ತದೆ. ಮುಂಭಾಗದ ಬಂಪರ್ ಜಕಮ್ ಗೊಂಡಿರುತ್ತದೆ. ಅದೇ ರೀತಿ ಮಿರರ್ ಗಳು ಸಹ ಜಕಮ್‌ಗೊಂದಡಿರುತ್ತದೆ. ಮುಂಭಾಗದ ಬಾಡಿ ಜಕಮ್ ಗೊಂಡಿರುತ್ತದೆ. ಅದೇ ರೀತಿ ಕ್ಯಾಂಟರ್ ವಾಹನವನ್ನು ಪರೀಶಿಲಿಸಿದಾಗ ಬಲ ಭಾಗದ ಮಿರರ್ ಜಕಮ್ ಗೊಂಡಿತ್ತು. ಮುಂದಿನ ಬಂಪರ್ ಹಾಗೂ ಹೆಡ್ ಲೈಟ್ ಜಕಮ್ ಗೊಂಡಿರುತ್ತದೆ. ಸದರಿ ವರದಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು. ನಾನು ಪರಿಶೀಲಿಸಿದ ವಾಹನದ ಪೋಟೊಗಳನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿಯು ಸದರಿ ವಾಹನಗಳ ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ-5 ರಿಂದ 7 ಮತ್ತು ನಿಪಿ-10 ರಿಂದ 13 ಎಂದು ಗುರುತಿಸಲಾಗಿರುತ್ತದೆ. KA-04-D-8475 ಹೆವಿ ವಾಹನ ಲಾರಿ ಬಂದು ಎದುರುಗಡೆಯಿಂದ ಬರುತ್ತಿದ್ದ ಮಾರುತಿ ಕಾರ್ ಸಂಖ್ಯೆ KA-02-MD-3487 ಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆಸಿದಾಗ ನಿಪಿ-22 ರಲ್ಲಿ ಆಗಿರುವಂತಹ ಜಕಮ್ ಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಆರ್ ವಕೀಲರಿಂದಃ</u>**

ನನ್ನ ವರದಿಯಲ್ಲಿ ಪೋಲಿಸ್ ನವರು ಯಾವ ದಿನ ಕೋರಿಕೆ ಸಲ್ಲಿಸಿದ್ದರು ಎಂದು ನಮೂದು ಆಗಿಲ್ಲ ಎಂದರೆ ಸರಿ. ನಿಪಿ-10 ರ ಪೋಟೊದಲ್ಲಿರುವ ವಾಹನ ನಾನು ಪರಿಶೀಲಿಸಿದಾಗಲೂ ಅದೇ ರೀತಿ ಇತ್ತು ಎಂದರೆ ಸರಿ. ನಿಪಿ-5 ರಲ್ಲಿ ಮಾರುತಿ ಒಮಿನಿ ಕಾರ್ ನ ಮುಂಭಾಗದ ಚಾಲಕರ ಸೀಟ್ ಕಡೆ ತುಂಬಾ ಜಕಮ್ ಆಗಿದೆ ಎಂದರೆ ಸರಿ. ಮಾರುತಿ ಒಮಿನಿಗೆ ಆದ ಜಕಮ್ ಅಷ್ಟೆ ಕ್ಯಾಂಟರ್ ಗೆ ಆಗುತ್ತದೆ ಎಂದರೆ ಸರಿಯಲ್ಲ. ನಿಪಿ-10 ರಲ್ಲಿರುವ ಕ್ಯಾಂಟರ್ ವಾಹನಕ್ಕೆ ಚಾಲಕನ ಸೀಟ್ ನ ಕಡೆ ಅಥವಾ ಮುಂಭಾಗದಲ್ಲಿ ಯಾವುದೇ ಜಕಮ್ ಆಗಿಲ್ಲ ಎಂದರೆ ಸರಿ. ಆದರೆ ಸಾಕ್ಷಿ

| | |
|---|---|
| ಫ್ರಾಸಾ | 17 |
| ಚಾಸಾ | 12 |

ಮುಂದುವರೆದು ನನ್ನ ವರದಿಯಲ್ಲಿ ಅದರ ಬಂಪರ್ ಗೆ ಜಕಮ್ ಆಗಿದೆ ಎಂದು ಹೇಳಿರುತ್ತೇನೆ.

ಸಾಕ್ಷಿಗೆ ವಾಹನಗಳಿಗೆ ಅಪಘಾತವು  ಮುಖಾಮುಖಿ ಆಗಿದೆಯೇ ಎಂದರೆ ಸಾಕ್ಷಿಯು ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಕ್ಯಾಂಟರ್ ವಾಹನದಿಂದ ಒಮಿನಿ ಕಾರ್ ಯಾವುದೇ ಅಪಘಾತ ಸಂಭವಿಸಿಲ್ಲ ಎಂದರೆ ಸರಿಯಲ್ಲ.  ಕ್ಯಾಂಟರ್ ವಾಹನದ ಮುಂಭಾಗದ ಬಲ ಭಾಗಕ್ಕೆ ಯಾವುದೇ ಜಕಮ್ ಆಗಿರುವುದಿಲ್ಲ (ಚಾಲಕನ ಸೀಟಿನ ಕಡೆ). ನನ್ನ ಸಮಕ್ಷಮ ದಲ್ಲ್ ಪೋಲಿಸರು ಸದರಿ ವಾಹನಗಳ ಪೋಟೊಗಳನ್ನು ತೆಗೆಯಲಿಲ್ಲ. ಪೋಲಿಸರಿಗೆ ಅನುಕೂಲವಾಗಲು ನಿಪಿ-22 ನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಜಕಮ್ ಹಾಗೂ ಅಪಘಾತ ಸದರಿ ವಾಹನಗಳಿಗೆ ಆಗದೇ ಇದ್ದರೂ ಸಹ ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ಯಾಂಟರ್ ವಾಹನಕ್ಕೆ ಮುಂಭಾಗದ ಬಲ ಭಾಗದ ಹೆಡ್ ಲೈಟ್ , ಮಿರರ್ ಹಾಗೂ ಮುಂಭಾಗದ ಬಂಪರ್ ಗೆ ಯಾವುದೇ ಜಕಮ್ ಆಗದೇ ಇದ್ದರೂ ಸುಳ್ಳು ವರದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿರುವ ಪೋಟೊಗಳಲ್ಲಿರುವ ಸಹ ನಾನು ಹೇಳಿರುವಂತಹ ಜಕಮ್ ಕಾಣುವುದಿಲ್ಲ ಎಂದರೆ ಸರಿಯಲ್ಲ.

| | |
|---|---|
| ಫ್ರಾಸಾ | 17 |
| ಚಾಸಾ | 12 |

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ25.07.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**